**ದಿನಾಂಕ : *21-02-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : *4* ನೇ ಎದರುದಾರರ ಪರ ಶ್ರೀ. ಎಮ್ ?ಎಸ್ ಹೆಚ್ ವಕೀಲರಿಂದ**

ನನ್ನ ಹೆಸರು ಹರಿರಾಮ ಹನುಮರಾಮ ಪಟೇಲ್ ಎಂದು ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಅಪಘಾತವಾದ ದಿನ ಇನೋವಾ ವಾಹನದಲ್ಲಿ 4 ಜನರು ಇದ್ದೇವು. ಸದರಿ ಪ್ರಕರಣದಲ್ಲಿ ನಾನು ಕೂಡ ಒಬ್ಬ ಆರೋಪಿ ಇರುತ್ತೇನೆ. ಇನೋವಾ ವಾಹನವು ನನ್ನ ಸ್ನೇಹಿತನಿಗೆ ಸಂಬಂದಪಟ್ಟಿದ್ದು. ಅದನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿರುವುದಿಲ್ಲ. ಸದರಿ ಅಪಘಾತವು ಸ್ಕೂಟಿ ಮತ್ತು ಟ್ರಕ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿದಾರರು ಟ್ರಕ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳುತ್ತಾರೆ. ಅಪಘಾತವಾದ ನಂತರ ಕಟ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆಸ್ಪತ್ರೆಯಲ್ಲಿ ನನ್ನ ಎಡಗಾಲಿಗೆ ಚಿಕಿತ್ಸೆ ಮಾಡಿರುತ್ತಾರೆ. ನನ್ನ ಹಣೆಗೆ ಮತ್ತು ಗದ್ದಕ್ಕೆ ಪೆಟ್ಟಾಗಿರುತ್ತದೆ. ನಾನು ಹಾಜರು ಪಡಿಸಿರುವ ವೈದ್ಯಕೀಯ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳ ಮೇಲೆ ವೈದ್ಯರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಎದುರುದಾರರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಇಂಡಿಯಲ್ಲಿ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನಾನು ತಿಂಗಳಿಗೆ 30 ಸಾವಿರ ರೂ. ದುಡಿಯುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಕೊನೆಯಬಾರಿಗೆ ಆಸ್ಪತ್ರೆಗೆ ತೋರಿಸಲು ಕಟ್ಟಿ ಆಸ್ಪತ್ರೆಗೆ ಯಾವಾಗ ಹೋಗಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾನು 2 ರಿಂದ 3 ಬಾರಿ ಗುಜರಾತ್ ಗೆ ತೋರಿಸಲು ಹೋಗಿದ್ದೆ ಎಂದು ಹೇಳುತ್ತಾರೆ. ನಾನು ಗುಜರಾತ್ ನಲ್ಲಿ ತೋರಿಸಿರುವ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲಿನ ಹಾಗೆ ಕೆಲಸ ಮಾಡಲು ಈಗ ಬರುವುದಿಲ್ಲ. ಹೆಚ್ಚಿನ ಪರಿಹಾರ ಪಡೆಯಲು 4 ನೇ ಎದುರುದಾರರನ್ನ ಪಕ್ಷಗಾರರನ್ನಾಗಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನೋವಾ ವಾಹನಕ್ಕೆ ಕೇವಲ 3rd party ವಿಮೆ ಇರುವುದರಿಂದ ಪರಿಹಾರವನ್ನು ಪಡೆಯಲು ನಾನು ಭಾದ್ಯಸ್ತನಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಟ್ರಕ್ ವಾಹನದ ಮಾಲೀಕರಿಂದ ಮತ್ತು ವಿಮೆ ಕಂಪನಿಯಿಂದ ಪರಿಹಾರವನ್ನು ಪಡೆಯಲು ಭಾದ್ಯಸ್ತನು ಎಂದರೆ ಸರಿಯಲ್ಲ. ನನ್ನ ವಯಸ್ಸಿನ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : *3* ನೇ ಎದರುದಾರರ ಪರ ಶ್ರೀಮತಿ ಎ ಸಿ ಜಿ ವಕೀಲರಿಂದ**

ಸದರಿ ಅಪಘಾತವು ಟ್ರಕ ಮತ್ತು ಇನೋವಾ ವಾಹನಗಳ ಮದ್ಯ ಆಗಿರುತ್ತದೆ. ಸದರಿ ವಾಹನಗಳ ನಂಬರ ಹೇಳಲು ಆಗುವುದಿಲ್ಲ. ಇನೋವಾ ವಾಹನದ ತಪ್ಪಿನಿಂದ ಸದರಿ

ಅಪಘಾತವು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಟ್ರಕ ವಾಹನದ ಮಾಲಕ ಮತ್ತು ವಿಮಾ ಕಂಪನಿಯವರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿ.

**ಪಾಟೀ ಸವಾಲು : *2* ನೇ ಎದರುದಾರರ ಪರ ಶ್ರೀ ಆರ್ ಕೆ ಬಿ ವಕೀಲರಿಂದ**

ನನಗೆ ಹರೀಶ ಮತ್ತು ಹರಿರಾಮ ಎಂದು ಕರೆಯುತ್ತಾರೆ. ನಾನು ಮೊದಲು ಗುಜರಾತ್ ನಲ್ಲಿ ಇರುತ್ತಿದ್ದೆ. ನನ್ನ ಅರ್ಜಿಯಲ್ಲಿ ನಮೂದಿಸಿದ ವಿಳಾಸವು ಶಾಶ್ವತ ವಿಳಾಸ ಆಗಿರುತ್ತದೆ. ನಾನು ಕುಂಬಾರವಾಡದಲ್ಲಿ ವಾಸ ಮಾಡುತ್ತೇನೆ. ನಾನು ಅಪಘಾತವಾದ ದಿನ ಇನೋವಾ ವಾಹನವನ್ನು ಚಲಾಯಿಸುತ್ತಿದ್ದೆ. ನಾನು ಬಾಗಲಕೋಟೆಯಿಂದ ಬರುವಾಗ ಪೆಟ್ರೋಲಬಂಕ್ ಹತ್ತಿರ ಸ್ವಲ್ಪ ಕರ್ವ ಇರುತ್ತದೆ. ಸದರಿ ಅಪಘಾತದಲ್ಲಿ ಒಂದು ಸ್ಕೂಟಿ, ಒಂದು ಇನೋವಾ ವಾಹನ ಮತ್ತು ಒಂದು ಲಾರಿ ಭಾಗಿ ಆಗಿರುತ್ತವೆ. ಸ್ಕೂಟಿ ವಾಹನದ ಚಾಲಕನು ಮದ್ಯ ಬಂದಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿದಾರರು ಸ್ಕೂಟಿ ವಾಹನದ ಚಾಲಕನನ್ನು ಬಚಾವ ಮಾಡಲು ಹೋಗಿ ಟ್ರಕ ಚಾಲಕನು ನಮ್ಮ ವಾಹನಕ್ಕೆ ಅಪಘಾತ ಪಡಿಸಿರುತ್ತಾನೆ ಎಂದು ಹೇಳುತ್ತಾರೆ. ಅಪಘಾತ ವಾದ ದಿನ ಸ್ಕೂಟಿ ವಾಹನ ಇರದೇ ಇದ್ದರೆ ನಮ್ಮ ವಾಹನ ಮತ್ತು ಟ್ರಕ್ ಎರಡೂ ವಾಹನಗಳು ಆರಾಮವಾಗಿ ಪಾಸ್ ಆಗುತ್ತಿದ್ದವು. ಪೋಲಿಸರು ನನ್ನನ್ನು ಕರೆಸಿದ್ದರು ಮತ್ತು ವಿಚಾರಣೆ ಮಾಡಿರುತ್ತಾರೆ. ಸದರಿ ಅಪಘಾತ ದಲ್ಲಿ ನನ್ನನ್ನು ಕೂಡ ಒಬ್ಬ ಆರೋಪಿಯನ್ನಾಗಿ ಮಾಡಿರುತ್ತಾರೆ. ಅಪಘಾತವಾದ ದಿನ ವಾಹನವನ್ನು ಜೊರಾಗಿ ಚಲಾಯಿಸಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಪಪ್ಪುದೇವಿ ನನ್ನ ಹೆಂಡತಿ. ನನಗೆ ಸಂಬಂದಪಟ್ಟ ಕಿರಾಣಿ ಅಂಗಡಿ ಇರುವುದಿಲ್ಲ. ನಾನು ಇನ್ನೊಬ್ಬರ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನನಗೆ ತಿಂಗಳಿಗೆ *15* ಸಾವಿರ ರೂ.ಗಳನ್ನು ನೀಡುತ್ತಾರೆ. ನನಗೆ ನಗದು ರೂಪದಲ್ಲಿ ಸಂಬಳವನ್ನು ಕೊಡುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕಿರಾಣಿ ಅಂಗಡಿಯ ಹೆಸರು ನಮೂದಿಸಿರುವುದಿಲ್ಲ. ಹೆಚ್ಚಿನ ಪರಿಹಾರಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿಗೆ *4* ಸಾವಿರ ರೂ. ಆಸ್ಪತ್ರೆಯ ಖರ್ಚಾಗುತ್ತದೆ ಎಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ *4* ಸಾವಿರ ರೂ. ಹೆಚ್ಚಿನ ಆಸ್ಪತ್ರೆಯ ಖರ್ಚು ಆಗುತ್ತದೆ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ನನಗೆ ಸದರಿ ಅಪಘಾತದಿಂದ ಗಾಯದ ನೋವಿನ ಕುರಿತು *2* ಲಕ್ಷ ರೂ.ಗಳು, ಮಾನಸಿಕ ನೋವು *2* ಲಕ್ಷ ರೂ., ಭವಿಷ್ಯತ್ತಿನಲ್ಲಿ ಆದಾಯದ ಹಾನಿ *20* ಲಕ್ಷರೂ., ಶಾಶ್ವತ ಅಂಗ ವಿಕಲತೆ *20* ಲಕ್ಷ ರೂ., ಆಸ್ಪತ್ರೆಯ ಖರ್ಚು *2* ಲಕ್ಷ *50* ಸಾವಿರ, ಮುಂದಿನ ಔಷದ ಖರ್ಚು *1* ಲಕ್ಷ ರೂ., ಮುಂದಿನ ಭವಿಷತ್ತಿನಲ್ಲಿಯ ಹೆಚ್ಚಿನ ಆದಾಯದ ಹಾನಿ *10* ಲಕ್ಷ ರೂ. ಮತ್ತು ಮುಂದಿನ ಶಸ್ತ್ರ ಚಿಕಿತ್ಸೆ *1* ಲಕ್ಷ ರೂ. ಬೇಕಾಗುತ್ತದೆ ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಕಮತಗಿ ಕ್ರಾಸನಲ್ಲಿ ಕರ್ವಿಂಗ್?ಇರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಒಂದು

ಸ್ಕೂಟಿ, ಒಂದು ಇನೋವಾ ವಾಹನ ಮತ್ತು ಒಂದು ಲಾರಿ ಭಾಗಿ ಆಗಿರುತ್ತವೆ. ಸದರಿ ಪ್ರಕರಣದಲ್ಲಿ ಸ್ಕೂಟಿ ವಾಹನದ ಮಾಲಕರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸ್ಕೂಟಿ ವಾಹನದ ಚಾಲಕನಿಂದ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸಾಕ್ಷಿದಾರರು ಟ್ರಕ ಚಾಲಕನ ತಪ್ಪಿನಿಂದ ಅಪಘಾತ ಅಗಿರುತ್ತದೆ ಎಂದು ಹೇಳುತ್ತಾರೆ. ನಾನು ಪರಿಹಾರಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳ ಮೇಲೆ ವೈದ್ಯರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು :** *1* ನೇ ಎದರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು . ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.02.22 11:05:04 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.